

ಚಿತ್ರ: ಎಂ.ಎಸ್. ಮಂಜುನಾಥ್

ಸಂಜೆ ಹಾಗೂ ರಾತ್ರಿ ವೇಳೆ ಕೊರೆಯುವ ಚಳಿಯೂ ಇರುತ್ತದೆ. ಹೀಗಾಗಿ ಸ್ವೆಟರ್ ಬೇಕೇ ಬೇಕು. ಜೊತೆಗೆ ಕಚೇರಿಗೆ ಹೋಗುವ ವೃತ್ತಿನಿರತರಿಗೆ ನಿತ್ಯವೂ ಎ.ಸಿ ರೂಮ್‌ನಲ್ಲೇ ಕೆಲಸ ಮಾಡಬೇಕಾಗುತ್ತದೆ. ಇಂಥವರಿಗೆ ಕೈಯಲ್ಲಿ ಅಥವಾ ಬ್ಯಾಗ್‌ನಲ್ಲಿ ಸ್ವೆಟರ್ ಇರಲೇಬೇಕಾಗುತ್ತದೆ. ಹೀಗಾಗಿ ವೃತ್ತಿನಿರತರಿಗಾಗಿಯೇ ತರಾವರಿ ಬಣ್ಣ, ವಿನ್ಯಾಸಗಳ ಸ್ವೆಟರ್‌ಗಳ ಲೋಕವೇ ಇದೀಗ ತೆರೆದುಕೊಂಡಿದೆ.

ಶರ್ಟ್ ಮಾದರಿಯ ಸ್ವೆಟರ್‌ಗಳು ಬಂದಿದ್ದು, ಇವು ಸಿಂಪಲ್ ಲುಕ್ ಕೊಡುತ್ತವೆ, ಕಚೇರಿಗಳಲ್ಲಿ ಕೆಲಸ ಮಾಡುವವರಿಗೆ ಇದು ಅನುಕೂಲ. ಸ್ಕರ್ಟ್‌ಗೆ, ಫ್ಲೋರಲ್ ಡ್ರೆಸ್‌ಗಳಿಗೆ, ಜೀನ್ಸ್ ಪ್ಯಾಂಟ್‌ಗಳಿಗೂ ಮ್ಯಾಚ್ ಆಗುವಂತಿದೆ ಈ ಸ್ವೆಟರ್. ಆಫ್ ಶೋಲ್ಡರ್ ಸ್ವೆಟರ್‌ಗಳೂ ಫ್ಯಾಷನಬಲ್ ಆಗಿಯೇ ಇರುತ್ತವೆ, ಲೇಡಿಸ್ ಟಾಪ್‌ನಂತಿರುವ ಸ್ವೆಟರ್ ಫ್ಯಾಷನ್‌ಪ್ರಿಯರಿಗೆ ಹಲವು ಆಯ್ಕೆಯ ಅವಕಾಶವನ್ನೂ ಒದಗಿಸಿದೆ.

ಫ್ಯಾಷನ್‌ಪ್ರಿಯರಿಗೆ ಇದೀಗ ಸ್ವೆಟರ್‌ನಲ್ಲಿ ಹಲವು ಆಯ್ಕೆಗಳಿವೆ. ರಾಯಲ್ ಲುಕ್ ಬಯಸುವವರಿಗಾಗಿಯೇ ಪಫ್ಡ್ ಸ್ಲೀವ್ ಸ್ವೆಟರ್, ಶಾರ್ಟ್ ಸ್ಲೀವ್, ಸ್ಲೀವ್‌ಲೆಸ್, ಟರ್ಟಲ್‌ನೆಕ್, ಓಪನ್ ನಿಟ್ಟೆಡ್ ಸ್ವೆಟರ್, ಲಾಂಗ್ ಸ್ಲೀವ್, ಲೇಸ್ ಸ್ವೆಟರ್, ಕಸೂತಿ, ಹರಳು, ಮಣಿಗಳಿಂದ ಅಲಂಕೃತವಾದ ದುಬಾರಿ ಸ್ವೆಟರ್‌ಗಳು ಬಂದಿವೆ, ಬಣ್ಣಗಳ ವೈವಿಧ್ಯ ಇರುವ ಕಾರಣ ಉಡುಪಿಗೆ ಮ್ಯಾಚ್ ಮಾಡಿಕೊಳ್ಳಬಹುದು ಇಲ್ಲವೇ ಮಿಕ್ಸ್ ಅಂಡ್ ಮ್ಯಾಚ್ ಕೂಡ ಮಾಡಿಕೊಳ್ಳಬಹುದು.

## ರೇನ್‌ಕೋಟ್ ವೈವಿಧ್ಯ

ರೇನ್‌ಕೋಟ್ ಮಳೆಯಿಂದ ರಕ್ಷಣೆ ಪಡೆಯುವ ಸಲುವಾಗಿ ಮಾತ್ರ ಎನ್ನುವ ಕಾಲ ಹೋಯಿತು. ಇದೀಗ ಏನಿದ್ದರೂ ಫ್ಯಾಷನ್‌ನ ಕಾಲ. ಮಕ್ಕಳು ಬಣ್ಣ ಬಣ್ಣದ ರೇನ್‌ಕೋಟ್‌ನಲ್ಲಿ ಇಷ್ಟಪಡುತ್ತಾರೆ. ಜೊತೆಗೆ ಪ್ರಾಣಿ, ಪಕ್ಷಿಗಳ ಚಿತ್ರ ಇದ್ದರಂತೂ ಮತ್ತೂ ಖುಷಿಪಡುತ್ತಾರೆ. ಹುಡುಗರಿಗೆ ಕಾರ್ಟೂನ್ ಕ್ಯಾರೆಕ್ಟರ್ ಚಿತ್ರ ಇದ್ದರೆ ಇಷ್ಟ. ಮಕ್ಕಳು ಇನ್ನಷ್ಟು ಮುದ್ದಾಗಿಯೂ ಕಾಣುತ್ತಾರೆ. ಮಕ್ಕಳಿಗೆ ಗಾಢಬಣ್ಣದ ಜೊತೆಗೆ ಕಾಮಿಕ್ಸ್ ಪ್ರಿಂಟ್ ಇರುವಂತಹ ಕೋಟ್‌ಗಳು ಇಷ್ಟವಾಗುತ್ತವೆ. ಸಾಧ್ಯವಾದಷ್ಟು ಕ್ಯಾಪ್ ಇರುವ ಕೋಟನ್ನೇ ಖರೀದಿಸಿ. ಇದರಿಂದ ತಲೆಯಿಂದಲೂ ಮಳೆಯ ರಕ್ಷಣೆ ಪಡೆಯಬಹುದು.

ದಶಮಾನ ಹಿಂದೆ ಮೈ ಪೂರ್ತಿ ಮುಚ್ಚುವಂತಹ ಪ್ಲಾಸ್ಟಿಕ್ ರೇನ್‌ಕೋಟ್‌ಗಳು ಮಾತ್ರವೇ ಸಿಗುತ್ತಿತ್ತು. ಅದಕ್ಕೂ ಹಿಂದೆ ಗೊರಬು, ಕಂಬಳಿಯನ್ನು ಅಡಿಯಿಂದ, ಮುಡಿವರೆಗೂ ಬಿಟ್ಟು ಮಳೆಯಿಂದ ರಕ್ಷಣೆ ಪಡೆಯುತ್ತಿದ್ದರು. ಈಗ ಫ್ಯಾಷನ್ ಜಗತ್ತಿನಲ್ಲಿ ರೇನ್‌ಕೋಟ್‌ಗಳು ವೈವಿಧ್ಯ ಪಡೆದುಕೊಂಡಿದೆ. ಮಳೆರಾಯನ ಆರ್ಭಟಕ್ಕೆ ಮೈ ನೆನೆಯದಂತೆ ರಕ್ಷಿಸುವ ರೇನ್‌ಕೋಟ್‌ಗಳ ಹೊರ ಮೈ ರಬ್ಬರ್, ಪ್ಲಾಸ್ಟಿಕ್ ಅಥವಾ ಚರ್ಮದ್ದಾಗಿರುತ್ತದೆ. ಒಳಮೈ ಲೆನಿನ್, ಕಾಟನ್, ಉಣ್ಣೆಯಿಂದ ತಯಾರಿಸಲಾಗುತ್ತದೆ. ■

## ಹೀಗೆ ಸಿದ್ಧರಾಗಿ...

ಮಳೆಗಾಲದಲ್ಲಿ ವಾತಾವರಣ ಸದಾ ತೇವಾಂಶದಿಂದ ಕೂಡಿರುತ್ತದೆ. ಈ ಸಮಯದಲ್ಲಿ ಹೊರಗಿನಿಂದ ಮನೆಗೆ ಬಂದ ತಕ್ಷಣ ಕಣ್ಣುಗಳನ್ನು ತಣ್ಣನೆಯ ನೀರಿನಿಂದ ತೊಳೆಯಿರಿ. ಸಾಬೂನಿನಿಂದ ಮುಖವನ್ನು ಶುಭ್ರವಾಗಿ ತೊಳೆಯಿರಿ. ಕ್ಲೆನ್ಸಿಂಗ್ ಮಿಲ್ಕ್‌ನಿಂದ ತ್ವಚೆಯನ್ನು ಸ್ವಚ್ಛಗೊಳಿಸುವುದು ಒಳಿತು. ತಲೆಗೆ ತಕ್ಷಣ ಸ್ನಾನ ಮಾಡಲು ಆಗದಿದ್ದಲ್ಲಿ ಕೂದಲನ್ನು ಶುಭ್ರವಾಗಿರುವಂತೆ ಬಾಚಿ ಕೊಡವಿ.

ಮಳೆಗಾಲದಲ್ಲಿ ಮಾಯಿಶ್ಚರೈಸರನ್ನು ಖರೀದಿಸುವಾಗ ಆಯಿಲ್ ಫ್ರೀ ಇರುವಂಥದ್ದನ್ನು ಆರಿಸಿ. ಏಕೆಂದರೆ ಆಯಿಲ್ ಫ್ರೀ ಇದ್ದಲ್ಲಿ ಜಿಡ್ಡಿನಂಶ ಹೋಗಿ ಮುಖದಲ್ಲಿ ಹೊಳಪು ಮೂಡುತ್ತದೆ.

ಮೇಕಪ್ ಹೆಚ್ಚು ಹೊತ್ತು ಇರುವುದಿಲ್ಲ. ಆದ್ದರಿಂದ ಮೇಕಪ್‌ಗೆ ಮೊದಲು ಮಂಜುಗಡ್ಡೆಯ ಸಣ್ಣ ಚೂರನ್ನು ಮುಖಕ್ಕೆ ಹಚ್ಚಿ. ಇದರಿಂದ ಮುಖದಲ್ಲಿನ ಎಣ್ಣೆಯ ಅಂಶ ಕಡಿಮೆಯಾಗುತ್ತದೆ ಮತ್ತು ಮೇಕಪ್ ಹೆಚ್ಚು ಹೊತ್ತು ಉಳಿಯುತ್ತದೆ. ಇಂತಹ ದಿನಗಳಲ್ಲಿ ತೈಲಯುಕ್ತ ಕಾಸ್ಮೆಟಿಕ್‌ಗಿಂತ ವಾಟರ್ ಬೇಸ್ಡ್ ಕಾಸ್ಮೆಟಿಕ್ಸ್ ಬಳಕೆ ಮಾಡಿ.

ರಾತ್ರಿ ಮಲಗುವಾಗ ವಿಟಮಿನ್ 'ಎ'ಯುಕ್ತ ನರಿಶಿಂಗ್ ಕ್ರೀಮಿಂದ ಮುಖಕ್ಕೆ ಮಾಲೀಶ್ ಮಾಡಿ. ನಂತರ ಮುಖವನ್ನು ಸ್ವಚ್ಛಗೊಳಿಸಿ. ಇದರಿಂದ ಚರ್ಮದ ರಂಧ್ರಗಳು ತೆರೆದುಕೊಳ್ಳುತ್ತವೆ ಮತ್ತು ಹೊಳೆಯುತ್ತವೆ.

ಮಳೆಯಲ್ಲಿ ತಲೆ ನೆನೆದಿದ್ದರೆ ಕೂದಲನ್ನು ಒಣಗಲು ಬಿಡಿ. ಈ ದಿನಗಳಲ್ಲಿ ಎರಡು ಮೂರು ದಿನಕ್ಕೊಮ್ಮೆ ಒಳ್ಳೆಯ ಶಾಂಪೂ ಬಳಸಿ. ತಲೆ ಸ್ನಾನ ಮಾಡಿ. ಇದರಿಂದ ತಲೆಯಲ್ಲಿ ಹೊಟ್ಟು ಉಂಟಾಗುವದಿಲ್ಲ.

**-ಶಿವಲೀಲಾ ಸೊಪ್ಪಿಮಠ**

## ಫ್ಯಾಷನ್ ಆ್ಯಕ್ಸೆಸರೀಸ್

- ಫ್ಯಾಷನ್ ಟ್ರೆಂಡ್ ಇಷ್ಟಪಡುವವರು ಮಳೆಗಾಲ ಮುನ್ನವೇ ಎಲ್ಲ ಫ್ಯಾಷನ್ ಆ್ಯಕ್ಸೆಸರೀಸ್ ಅನ್ನು ಖರೀದಿ ಮಾಡಿಡಿ.
- ಮಳೆಗಾಲದಲ್ಲಿ ಫ್ಯಾಷನಬಲ್ ಉಡುಪು ಬಳಸುವಾಗ ಗಾಢ ಬಣ್ಣಕ್ಕೇ ಆದ್ಯತೆ ನೀಡಿ ತಿಳಿಬಣ್ಣದ ಉಡುಪುಗಳ ಬದಲಾಗಿ ಕೆಂಪು, ಹಸಿರು, ಕಿತ್ತಳೆ,ಹಳದಿ ಮುಂತಾದ ಗಾಢ ಬಣ್ಣಗಳ ದಿರಿಸು ಒಳ್ಳೆಯದು.
- ಕಲರ್‌ಫುಲ್ ಹ್ಯಾಂಡ್ ಬ್ಯಾಗ್ ಬಳಸಿ.
- ಮೇಕಪ್ ಸರಳವಾಗಿರಲಿ. ಲಿಪ್‌ಸ್ಟಿಕ್ ತೆಳುವಾಗಿ ಹಚ್ಚಿಕೊಳ್ಳಿ. ಪೌಡರ್ ಬಳಸುವ ಮುನ್ನ ಫೌಂಡೇಶನ್ ಹಾಕಿಕೊಂಡರೆ ಹೆಚ್ಚುಕಾಲ ಸ್ಥಿರವಾಗಿ ಉಳಿಯುತ್ತದೆ.
- ಮಳೆಗಾಲದಲ್ಲಿ ದೊಡ್ಡ ಸೈಜಿನ ನೆಕ್ಲೇಸ್, ಆರ್ಟಿಸ್ಟಿಕ್ ಆಗಿರುವ ಸರ ಚೆನ್ನಾಗಿ ಕಾಣಿಸುತ್ತದೆ. ಗುಣಮಟ್ಟದ ಸ್ಕಾರ್ಫ್ ಬಳಕೆ ಉತ್ತಮ.
- ಕೊಡೆಯಲ್ಲೂ ಸ್ಟೈಲಿಶ್ ಆಗಿರುವುದನ್ನು ಬಳಸಿದರೆ ಉಡುಪಿಗೆ ತಕ್ಕ ಲುಕ್ ಕೊಟ್ಟು ಫ್ಯಾಷನಬಲ್ ಆಗಿಯೂ ಇರುತ್ತದೆ.
- ಜಾಕೆಟ್‌ಗಳು, ಹಗುರವಾದ ಉಡುಪುಗಳು, ಕ್ಯಾಪ್ ಹಾಕಿಕೊಳ್ಳಿ, ಲೆದರ್ ಶೂ ಬದಲಿಗೆ ಚಪ್ಪಲಿಗಳೇ ಸೂಕ್ತ. ದ್ವಿಚಕ್ರ ವಾಹನ ಓಡಿಸುವವರು ಕೈಗಳಿಗೆ ಪಾರದರ್ಶಕವಾದ ಗ್ಲೌಸ್ ಹಾಗೂ ಮಳೆಯಿಂದ ರಕ್ಷಣೆಗೆ ಉತ್ತಮ ಗುಣಮಟ್ಟದ ರೈನ್‌ಕೋಟ್ ಧರಿಸಿಕೊಳ್ಳಿ.
- ಮಳೆಯ ನೀರಿಗೆ ಒದ್ದೆಯಾದರೆ ದುಬಾರಿ ಬಟ್ಟೆ ಕಳೆಗುಂದುತ್ತದೆ. ಹೀಗಾಗಿ ಹತ್ತಿಯಿಂದ ತಯಾರಿಸಿದ ಫ್ಯಾಷನಬಲ್ ಉಡುಪುಗಳನ್ನೇ ಧರಿಸುವುದು ಸೂಕ್ತ.
- ಮಳೆಗಾಲದಲ್ಲಿ ತಲೆಗೂದಲನ್ನು ಫ್ರೀಯಾಗಿ ಬಿಡಬೇಡಿ. ತುಂಬಾ ಕೂದಲಿದ್ರೆ ಸ್ಟೈಲಿಶ್ ಆದ ಜಡೆ ಕಟ್ಟಿ.